ಬಿಬಿಎಂಪಿ ವ್ಯಾಪ್ತಿಯಲ್ಲಿ ಮನೆ ಬಾಗಿಲಿಗೆ ಹಂಚಿಕೆ; ₹25, ₹10 ದರ ನಿಗದಿ

10 ಲಕ್ಷ ರಾಷ್ಟ್ರಧ್ವಜ ಹಾರಿಸುವ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 'ಹರ್‌ಘರ್ ತಿರಂಗಾ' ಕಾರ್ಯಕ್ರಮದಡಿ ಕನಿಷ್ಠ 10 ಲಕ್ಷ ರಾಷ್ಟ್ರಧ್ವಜ ಹಾರಿಸುವ ಗುರಿ ಹೊಂದಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಿಬಿಎಂಪಿಗೆ ಧ್ವಜಗಳನ್ನು ಸರಬರಾಜು ಮಾಡಲಾಗುತ್ತದೆ. ₹25 ಹಾಗೂ ₹10 ಎರಡು ದರ ದಲ್ಲಿ ನಾಗರಿಕರು ಧ್ವಜಗಳನ್ನು ಖರೀದಿಸಬಹುದು. ನನ್ನದು ಎಂಬ ಭಾವನೆ ಬರಲಿ ಎಂಬ ಕಾರಣಕ್ಕೆ ದರ ನಿಗದಿ ಮಾಡಲಾಗಿದೆ' ಎಂದು ಸುದ್ದಿಗಾರರಿಗೆ ಬುಧವಾರ ವಿವರ ನೀಡಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಎಲ್ಲ ಕಚೇರಿಗಳಲ್ಲಿ ವಿಶೇಷ ಆಚರಣೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ವಿಶೇಷ ಕವರ್ ಅನ್ನು ಬಿಬಿಎಂಪಿ ಹೊರತರುತ್ತಿದೆ. ವಿಶೇಷ ಸ್ಟಿಕರ್, ಬ್ಯಾನರ್, ಎಲ್‌ಇಡಿಗಳನ್ನು ವಿನ್ಯಾಸಗೊಳಿಸಿ ಪ್ರದರ್ಶನ ಮಾಡಲಾಗುತ್ತದೆ. ಆ.10ರೊಳಗೆ ಕಾರ್ಯಕ್ರಮ ಪಟ್ಟಿ, ವಿವರಣೆ ಪ್ರಕಟಿಸಲಾಗುತ್ತದೆ ಎಂದರು.

ಎಲ್ಲ ಕಟ್ಟಡಗಳಲ್ಲೂ ಕಡ್ಡಾಯ

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2 ಲಕ್ಷ ಧ್ವಜ ಈಗಾಗಲೇ ಸರಬರಾಜು ಆಗಿದೆ. ಇವುಗಳನ್ನು ವಲಯಗಳ ಜಂಟಿ ಆಯುಕ್ತರಿಗೆ ಮರುವಿತರಣೆ ಮಾಡಲಾಗಿದೆ. ಅವರು ಮನೆಮನೆಗಳಿಗೆ ತಲುಪಿಸುವ ವ್ಯವಸ್ಥೆ ಮಾಡಲಿದ್ದಾರೆ' ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ರಂಗಪ್ಪ ಹೇಳಿದರು.

'ಶಾಲೆ–ಕಾಲೇಜು, ಚರ್ಚ್, ಮಸೀದಿ, ಮದರಸಾ ಸೇರಿ ಯಾವುದೇ ಸಂಸ್ಥೆಗಳು ಸರ್ಕಾರದಿಂದ ಅನುದಾನ ಪಡೆಯುತ್ತಿದ್ದರೆ ಆಯಾ ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜ ಹಾರಿಸುವುದು ಕಡ್ಡಾಯ. ಇದು ಎಲ್ಲರ ಸಂವಿಧಾನ ಹಕ್ಕೂ ಹೌದು. ಅದು ಆಗದಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಇದನ್ನು ವಲಯಗಳ ಜಂಟಿ ಆಯುಕ್ತರು ನಿರ್ವಹಣೆ ಮಾಡಲಿದ್ದಾರೆ' ಎಂದರು.

ಮೇಲ್ಸೇತುವೆ: ಶೀಘ್ರ ತೀರ್ಮಾನ

ಈಜಿಪುರ ಮೇಲ್ಸೇತುವೆಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶದಂತೆ ಮತ್ತೊಮ್ಮೆ ಗುತ್ತಿಗೆದಾರರೊಂದಿಗೆ ಮಾತುಕತೆ ನಡೆಸಿ, 9 ತಿಂಗಳಲ್ಲಿ ಕಾಮಗಾರಿ ನಡೆಸಲು ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಬಹು ಅಂತಸ್ತಿನ ವಾಹನ ನಿಲುಗಡೆ ಪ್ರದೇಶದಲ್ಲಿ ಅನಧಿಕೃತವಾಗಿ ಯಾರಾದರೂ ಬಂದಿದ್ದರೆ ಆ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಫ್ರೀಡಂ ಪಾರ್ಕ್ ಹಾಗೂ ಜೆ.ಸಿ. ರಸ್ತೆ ಬಹು ಅಂತಸ್ತಿನ ವಾಹನ ನಿಲುಗಡೆ ಆರಂಭವಾದ ಮೇಲೆ ಸುತ್ತಮುತ್ತಲಿನ ಪ್ರದೇಶದಲ್ಲಿ 'ನೋ ಪಾರ್ಕಿಂಗ್' ಮಾಡಲಾಗುತ್ತದೆ. ಈ ಬಗ್ಗೆ ಪೊಲೀಸ್ ಆಯುಕ್ತರೊಂದಿಗೆ ಚರ್ಚಿಸಲಾಗುವುದು ಎಂದರು.

ಪ್ಲಾಸ್ಟಿಕ್ ನಿಷೇಧ ಜಾರಿಗೆ ತರಲು ಎಲ್ಲೆಡೆ ಇನ್ನಷ್ಟು ಕ್ಷಿಪ್ರಗತಿಯ ಕಾರ್ಯಾಚರಣೆ ಮಾಡಲಾಗುತ್ತದೆ. ಗಾಂಧಿಬಜಾರ್ ಹಾಗೂ ಕೆ.ಆರ್. ಮಾರುಕಟ್ಟೆಯಲ್ಲಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರು.

ವಲಯವಾರು ವಾರ್ಡ್‌ಮಟ್ಟದಲ್ಲಿ ಎಲ್ಲ ಮನೆಗಳಿಗೂ ಧ್ವಜಗಳನ್ನು ವಿತರಿಸುವ ಕಾರ್ಯವನ್ನು ಸಹಾಯಕ ಎಂಜಿನಿಯರ್, ಕಂದಾಯ ನಿರೀಕ್ಷಕರಿಗೆ ವಹಿಸಲಾಗಿದೆ. ಅವರು ತಮ್ಮ ವ್ಯಾಪ್ತಿಯ ಮನೆಗಳಿಗೆ ಧ್ವಜಗಳನ್ನು ತಲುಪಿಸಬೇಕು. ಜನರು ₹25 ಅಥವಾ ₹10ರ ದರದ ಧ್ವಜವನ್ನು ಕೇಳಿದರೆ ಅವರಿಗೆ ನೀಡಬೇಕು. ಒಟ್ಟು ಹಣವನ್ನು ಅವರು ವಲಯ ಆಯುಕ್ತರ ಕಚೇರಿಯಲ್ಲಿ ಸಂದಾಯ ಮಾಡಬೇಕು. ಬಿಬಿಎಂಪಿ ಎಲ್ಲವನ್ನೂ ಒಟ್ಟುಗೂಡಿಸಿ ಸರ್ಕಾರಕ್ಕೆ ತಲುಪಿಸುತ್ತದೆ ಎಂದರು.

'ಹರ್ ಘರ್ ತಿರಂಗಾ'ದಡಿ ಆ.13ರಿಂದ 15ರವರೆಗೆ ರಾಷ್ಟ್ರಧ್ವಜವನ್ನು ಎಲ್ಲರೂ ಹಾರಿಸಬಹುದು. ಅದಕ್ಕೆ ಕೆಲವು ನಿಯಮಗಳಿವೆ. ಅವುಗಳ ಬಗೆಗೂ ಜನರಿಗೆ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಅಪಾರ್ಟ್‌ಮೆಂಟ್‌ಗಳವರಿಗೆ ಮಾಹಿತಿ ನೀಡಲಾಗುತ್ತದೆ. ಇದರ ಸಂಪೂರ್ಣ ನಿರ್ವಹಣೆಯನ್ನು ಆಡಳಿತ ವಿಭಾಗದ ವಿಶೇಷ ಆಯುಕ್ತರಿಗೆ ನೀಡಲಾಗಿದೆ' ಎಂದು ಹೇಳಿದರು.

ಬಿಬಿಎಂಪಿಯಲ್ಲಿರುವ ಎಲ್ಲ 16 ಸಾವಿರ ಪೌರಕಾರ್ಮಿಕರು ತಲಾ ₹10ರ ಧ್ವಜವನ್ನು ಪಡೆಯಲು ಸಮ್ಮತಿಸಿದ್ದಾರೆ. ಇವರಲ್ಲದೆ ನಮ್ಮ ಎಲ್ಲ ಸಿಬ್ಬಂದಿಯೂ ಖರೀದಿಸಲಿದ್ದಾರೆ. ಬಿಬಿಎಂಪಿಯಲ್ಲೇ ಸುಮಾರು 20 ಸಾವಿರ ಧ್ವಜ ಖರೀದಿಯಾಗಲಿದೆ ಎಂದರು.

'ಧರ್ಮ, ಜಾತಿ ಎಲ್ಲಕ್ಕಿಂತ ರಾಷ್ಟ್ರ, ರಾಷ್ಟ್ರಧ್ವಜ ದೊಡ್ಡದು. ಇದನ್ನು ನಮ್ಮ ಸಂವಿಧಾನವೇ ಹೇಳಿದೆ. ಜಾಗದ ಮಾಲೀಕತ್ವದ ಪ್ರಶ್ನೆ ಇದರಲ್ಲಿ ಬರುವುದೇ ಇಲ್ಲ. ಯಾವುದೇ ಕಟ್ಟಡ, ಮೈದಾನ ಇದಕ್ಕೆ ಹೊರತಲ್ಲ' ಎಂದು ಈದ್ಗಾ ಮೈದಾನ ವಿವಾದದ ಪ್ರಶ್ನೆಗೆ ಉತ್ತರಿಸಿದರು.

ಪಿಒಪಿ ಗಣಪತಿ ಮೂರ್ತಿಗಳನ್ನು ಬಳಸುವಂತಿಲ್ಲ. ಈ ಬಗ್ಗೆ ಸೂಕ್ತ ಮಾಹಿತಿ, ನಿಯಮಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಬೇಕಿದೆ ಎಂದರು.

ಪ್ರಧಾನಿ ಹುದ್ದೆಗೆ ಅಭ್ಯರ್ಥಿ ನಾಮನಿರ್ದೇಶನ

ಇರಾಕ್ ಸಂಸತ್‌ಗೆ ನುಗ್ಗಿ ಧ್ವಜ ಹಾರಿಸಿದ ಪ್ರತಿಭಟನಕಾರರು

ಬಾಗ್ದಾದ್ (ಎಪಿ): ಇರಾಕ್‌ನ ಧರ್ಮಗುರು ಮೊಕ್ತಾದ ಸಾದರ್ ಅವರ ಬೆಂಬಲಿಗರು ಬುಧವಾರ ಇರಾಕ್ ಸಂಸತ್ತಿಗೆ ನುಗ್ಗಿದ್ದಾರೆ.

ಪ್ರತಿಸ್ಪರ್ಧಿ ಬಣದವರು ಪ್ರಧಾನಿ ಹುದ್ದೆಗೆ ಅಭ್ಯರ್ಥಿಯನ್ನು ನಾಮ ನಿರ್ದೇಶನ ಮಾಡಿದ್ದರಿಂದ ಕೆರಳಿರುವ ಸಾದರ್ ಬೆಂಬಲಿಗರು ಸಂಸತ್ತಿನೊಳಗೆ ನುಗ್ಗಿ ಹಾಡಿ–ಕುಣಿ ದಾಡಿದ್ದಾರೆ. ಇರಾಕ್‌ನ ಧ್ವಜಗಳನ್ನೂ ಹಾರಿಸಿದ್ದಾರೆ.

ಪೊಲೀಸರು ಅಶ್ರುವಾಯು ಸಿಡಿಸಿದರೂ ಬಗ್ಗದ ಪ್ರತಿಭಟನಕಾರರು ಹಸಿರು ವಲಯದಲ್ಲಿರುವ ಸಂಸತ್ ಪ್ರವೇಶಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

'ಪ್ರತಿಭಟನಕಾರರು ಕೂಡಲೇ ಸಂಸತ್ತಿನಿಂದ ಹೊರಹೋಗಬೇಕು. ಭದ್ರತಾ ಪಡೆಯವರು ಅವರನ್ನು ಆಚೆ ಹಾಕಬೇಕು' ಎಂದು ಪ್ರಧಾನ ಮಂತ್ರಿ ಮುಸ್ತಾಫಾ ಅಲ್ ಖಾಧಿಮಿ ಆಗ್ರಹಿಸಿದ್ದಾರೆ.

ಅಕ್ಟೋಬರ್‌ನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಸಾದರ್ ಬಣವು ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಬಹುಮತಕ್ಕೆ ಅಗತ್ಯವಿರುವಷ್ಟು ಸ್ಥಾನ ಗೆಲ್ಲಲು ಆಗಿರಲಿಲ್ಲ.

'ಅಧಿಕಾರದಲ್ಲಿರುವ ಭ್ರಷ್ಟ ಅಧಿಕಾರಿಗಳ ವಿರುದ್ಧವಾಗಿದ್ದೇನೆ. ಸುದಾನಿಯನ್ನು ಅಭ್ಯರ್ಥಿಯಾಗಿ ನಾಮನಿರ್ದೇಶನ ಮಾಡಿರುವುದನ್ನು ವಿರೋಧಿಸುತ್ತೇನೆ. ಏಕೆಂದರೆ ಆತ ಭ್ರಷ್ಟ' ಎಂದು ಪ್ರತಿಭಟನಾಕಾರ 41 ವರ್ಷದ ದಿನಗೂಲಿ ನೌಕರ ಮೊಹಮ್ಮದ್ ಅಲಿ ಹೇಳಿದರು.

ಮೊಹಮ್ಮದ್ ಸುದಾನಿಯನ್ನು ಪ್ರಧಾನಿ ಸ್ಥಾನಕ್ಕೆ ನಾಮನಿರ್ದೇಶನ ಮಾಡಿರುವುದನ್ನು ವಿರೋಧಿಸಿ ಇರಾಕ್‌ನ ಧರ್ಮಗುರು ಮೊಕ್ತದಾ ಸಾದರ್ ಅವರ ಬೆಂಬಲಿಗರು ಬಾಗ್ದಾದ್‌ನ ತಹ್ರೀರ್ ಚೌಕದಲ್ಲಿ ಪ್ರತಿಭಟಿಸಿದರು. –ಎಎಫ್‌ಪಿ ಚಿತ್ರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಂಕ್ಷಿಪ್ತ ಸುದ್ದಿ

ವಿವಿಧೆಡೆ ಗುಡುಗು ಸಹಿತ ಮಳೆ

ಬೆಂಗಳೂರು: ರಾಜಧಾನಿಯ ವಿವಿಧೆಡೆ ಬುಧವಾರ ಸಂಜೆ ಉತ್ತಮ ಮಳೆ ಸುರಿಯಿತು.

ಇಡೀ ದಿನ ಬಿಸಿಲ ವಾತಾವರಣವಿದ್ದರೂ ಸಂಜೆಯ ವೇಳೆಗೆ ಅಲ್ಲಲ್ಲಿ ಜೋರು ಮಳೆ ಸುರಿದು ತಂಪೆರೆಯಿತು.

ಬನಶಂಕರಿ, ಜಯನಗರ, ಜೆ.ಪಿ. ನಗರ, ಹೊಸಕೆರೆಹಳ್ಳಿ, ಮೆಜೆಸ್ಟಿಕ್, ಮಾಗಡಿ ರಸ್ತೆ, ಮಾರುಕಟ್ಟೆ ಸುತ್ತಮುತ್ತ ಗುಡುಗು ಸಹಿತ ಮಳೆಯಾಗಿದೆ.

ಎಚ್‌ಎಎಲ್, ಶಿವಾಜಿನಗರ, ವಸಂತ ನಗರ, ಮೈಸೂರು ಬ್ಯಾಂಕ್ ವೃತ್ತ, ಎಂ.ಜಿ. ರಸ್ತೆ ಹಾಗೂ ವಿಜಯನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಧಾರಣ ಮಳೆಯಾಗಿದೆ. ನಗರದಲ್ಲಿ ಒಂದು ವಾರದಿಂದ ಮಳೆ ಬಿಡುವು ನೀಡಿತ್ತು.

ಬುಧವಾರ ಸಂಜೆ ಸುರಿದ ಮಳೆಯಿಂದ ಕಚೇರಿಯಿಂದ ಮನೆಗೆ ದ್ವಿಚಕ್ರ ವಾಹನಗಳಲ್ಲಿ ತೆರಳುತ್ತಿದ್ದವರು ಪರದಾಡಬೇಕಾಯಿತು.

ಕೆಡ್ಜ್ – ಜಗ್ಸೋಮ್‌ನಿಂದ ಐಬಿಬಿಎ ಕೋರ್ಸ್ ಪ್ರಾರಂಭ

ಬೆಂಗಳೂರು: ಕೆಡ್ಜ್ ಬಿಜಿನೆಸ್ ಸ್ಕೂಲ್(ಫ್ರಾನ್ಸ್) ಮತ್ತು ಮುಂಬೈನ ವಿಜಯಭೂಮಿ ವಿಶ್ವವಿದ್ಯಾಲಯದ ಜಗದೀಶ್ ಶೇತ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ (ಜಗ್ಸೋಮ್) ಸಹಯೋಗದಲ್ಲಿ ನಾಲ್ಕು ವರ್ಷಗಳ ಇಂಟರ್‌ನ್ಯಾಷನಲ್ ಬ್ಯಾಚಲರ್ ಇನ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್(ಐಬಿಬಿಎ) ಪದವಿ ಕೋರ್ಸ್ ಪ್ರಾರಂಭಿಸಲಾಗಿದೆ.

'ಪ್ರತಿಯೊಬ್ಬ ವಿದ್ಯಾರ್ಥಿಗೆ ಎರಡು ಸಂಸ್ಥೆಗಳು ಪದವಿ ಪ್ರದಾನ ಮಾಡಲಿವೆ. ಭಾರತೀಯ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಎರಡೂ ದೇಶಗಳ ವಿಶ್ವದರ್ಜೆ ಶಿಕ್ಷಣವನ್ನು ಒದಗಿಸುವುದು ಕೆಡ್ಜ್ ಮತ್ತು ಜಗ್ಸೋಮ್‌ನ ಉದ್ದೇಶವಾಗಿದೆ' ಎಂದು ವಿಜಯಭೂಮಿ ವಿಶ್ವವಿದ್ಯಾಲಯದ ಕುಲಪತಿ ಡಾ. ಆತಿಶ್ ಛಟ್ಟೋಪಾಧ್ಯಾಯ ಅವರು ಬೆಂಗಳೂರಿನ ಜಗ್ಸೋಮ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತಿಳಿಸಿದರು.

'ಅಕ್ಟೋಬರ್ 1ರಿಂದ ಮುಂಬೈನ ವಿಜಯಭೂಮಿ ವಿಶ್ವವಿದ್ಯಾಲಯದ ಜಗ್ಸೋಮ್ ವಿಭಾಗದಲ್ಲಿ ಎರಡು ವರ್ಷಗಳ ಆರಂಭಿಕ ಕಲಿಕೆಗೆ ಮತ್ತು ತದನಂತರ ಫ್ರಾನ್ಸ್ ದೇಶದ ಮಾರ್ಸಲ್‌ನಲ್ಲಿ ಮತ್ತೆರೆಡು ವರ್ಷಗಳ ಕಲಿಕೆಗೆ ಯೋಜನೆ ರೂಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಅಜಿತ್ ನೈನನ್‌ಗೆ ಬಾರ್ಟನ್ಸ್ ಪ್ರಶಸ್ತಿ

ಬೆಂಗಳೂರು: ಬಾರ್ಟನ್ಸ್ ಜೀವಮಾನ ಸಾಧನೆ ಪ್ರಶಸ್ತಿಗೆ 'ಟೈಮ್ಸ್ ಆಫ್ ಇಂಡಿಯಾ'ದ ವ್ಯಂಗ್ಯಚಿತ್ರಕಾರ ಅಜಿತ್ ನೈನನ್ ಆಯ್ಕೆಯಾಗಿದ್ದಾರೆ.

ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯ 15ನೇ ವಾರ್ಷಿಕೋತ್ಸವದ ಅಂಗವಾಗಿ ಆಗಸ್ಟ್ 6ರಂದು ನಡೆಯುವ ಭಾರತೀಯ ವ್ಯಂಗ್ಯಚಿತ್ರಗಳ ಪ್ರದರ್ಶನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

1961ರಿಂದ ಉತ್ಕೃಷ್ಟ ಬೆಳ್ಳಿಯ ಕಲಾಕೃತಿಗಳು ಮತ್ತು ವಸ್ತುಗಳಿಗೆ ಹೆಸರಾದ ಬಾರ್ಟನ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ ಮೆಹತಾ ವಾರ್ಷಿಕ ಜೀವಮಾನ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಮೊದಲನೇ ಬಾರ್ಟನ್ಸ್ ಪ್ರಶಸ್ತಿಗೆ ಅಜಿತ್ ನೈನನ್ ಅವರನ್ನು ಆಯ್ಕೆ ಮಾಡಲಾಗಿದೆ.

ಗೋಗೇರಿ ಪುಸ್ತಕಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯ 2013ರ ಲಲಿತ ಪ್ರಬಂಧ ಪುಸ್ತಕ ಬಹುಮಾನಕ್ಕೆ ಎಂ.ಡಿ. ಗೋಗೇರಿ ಅವರ 'ಮಹಾಮಾತೆ ಮಲ್ಲಕ್ಕ ಮತ್ತು ಇತರೆ ಪ್ರಬಂಧಗಳು' ಪುಸ್ತಕ ಆಯ್ಕೆಯಾಗಿದೆ.

ಆಗ ಪುಸ್ತಕಗಳ ಆಯ್ಕೆ ವೇಳೆ ಗೋಗೇರಿ ಹಾಗೂ ಭಾರದ್ವಾಜ ಕೆ. ಆನಂದತೀರ್ಥ ಅವರ 'ಕೌತುಕವಲ್ಲದ ಕ್ಷಣಗಳು' ಪುಸ್ತಕಗಳಿಗೆ ಸಮಾನ ಅಂಕ ನೀಡಲಾಗಿತ್ತು. ಆ ವೇಳೆ ಗೋಗೇರಿ ಅವರ ಪುಸ್ತಕಕ್ಕೆ ಬಹುಮಾನ ನೀಡುವುದೆಂದು ಅಕಾಡೆಮಿಯ ಸಮಿತಿ ನಿರ್ಣಯಿಸಿತ್ತು. ಈ ವಿಚಾರಕ್ಕೆ ಭಾರದ್ವಾಜ ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ಈ ಹಿಂದೆ ನೀಡಿದ್ದ ಪುಸ್ತಕ ಬಹುಮಾನ ರದ್ದುಗೊಳಿಸಿ, ಆಯ್ಕೆಗೆ ಮತ್ತೊಮ್ಮೆ ಉಪ ಸಮಿತಿ ರಚಿಸುವಂತೆ ಕೋರ್ಟ್ ಸೂಚಿಸಿತ್ತು. ಅದರಂತೆ ಅಕಾಡೆಮಿಯ ಅಧ್ಯಕ್ಷ ಬಿ.ವಿ. ವಸಂತಕುಮಾರ್ ನೇತೃತ್ವದಲ್ಲಿ ಜಿನದತ್ತ ಹಡಗಲಿ ಹಾಗೂ ಮಾರ್ಷಲ್ ಶರಾಂ ಅವರನ್ನು ಒಳಗೊಂಡ ಸಮಿತಿ, 'ಮಹಾಮಾತೆ ಮಲ್ಲಕ್ಕ ಮತ್ತು ಇತರೆ ಪ್ರಬಂಧಗಳು' ಪುಸ್ತಕ ಶಿಫಾರಸು ಮಾಡಿತ್ತು. ಇದೇ 25ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಉಪಸಮಿತಿ ಶಿಫಾರಸನ್ನು ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಚೆನ್ನೈ: ಶಾಲಾ ಮಕ್ಕಳಿಗೆ ಉಚಿತವಾಗಿ ಉಪಾಹಾರ

ಚೆನ್ನೈ: ಒಂದರಿಂದ ಐದನೇ ತರಗತಿವರೆಗಿನ ಮಕ್ಕಳಿಗೆ ಬೆಳಗಿನ ತಿಂಡಿ ಉಚಿತವಾಗಿ ವಿತರಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಮೊದಲ ಹಂತದ ಅನುಷ್ಠಾನವು ಸೆಪ್ಟೆಂಬರ್ ಮಧ್ಯಭಾಗದಿಂದ ಪ್ರಾರಂಭವಾಗಲಿದೆ. ಇದಕ್ಕಾಗಿ 1,545 ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಮೊದಲ ಹಂತದ ಅನುಷ್ಠಾನದಿಂದ 1.14 ಲಕ್ಷ ಮಕ್ಕಳಿಗೆ ಪ್ರಯೋಜನವಾಗಲಿದೆ.

'ಸೋಮವಾರದಿಂದ ಶುಕ್ರವಾರದವರೆಗೆ ಬೆಳಗಿನ ತಿಂಡಿಯನ್ನು ಬಿಸಿ ಬಿಸಿಯಾಗಿ ನೀಡಲು ಸರ್ಕಾರ ಉದ್ದೇಶಿಸಿದೆ. ಪ್ರತಿ ದಿನವೂ ಬೇರೆ ಬೇರೆ ತಿಂಡಿಗಳನ್ನು, ಅಂದರೆ, ಉಪ್ಪಿಟ್ಟು, ಕಿಚಡಿ, ಪೊಂಗಲ್ ನೀಡಲಾಗುವುದು. ಶುಕ್ರವಾರದಂದು ರವಾ ಕೇಸರಿಬಾತ್ ಅಥವಾ ಶಾವಿಗೆ ಕೇಸರಿಬಾತ್ ನೀಡಲು ಯೋಜಿಸಲಾಗಿದೆ. ಇದಕ್ಕಾಗಿ ಸರ್ಕಾರವು ಒಟ್ಟು ₹33.56 ಕೋಟಿ ಮೀಸಲಿರಿಸಿದೆ' ಎಂದು ಸರ್ಕಾರದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ರಾಜ್ಯ ಸರ್ಕಾರಕ್ಕೆ ವರ್ಷ ಪೂರೈಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪ್ರಮುಖ ಐದು ಘೋಷಣೆಗಳಲ್ಲಿ ಬೆಳಗಿನ ತಿಂಡಿ ನೀಡುವುದೂ ಒಂದಾಗಿತ್ತು.

ಕಾಂಗ್ರೆಸ್ ವಿರುದ್ಧ ಸಿ.ಎಂ ವಾಗ್ದಾಳಿ

ಬೆಂಗಳೂರು: 'ಕಾಂಗ್ರೆಸ್ ಪಕ್ಷವೇ ಭ್ರಷ್ಟಾಚಾರದ ಬ್ರಹ್ಮಾಂಡ ಇದ್ದಂತೆ. ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಮತ್ತು ಹಿಂದಿನ ಅಧ್ಯಕ್ಷ ಇಬ್ಬರೂ ಭ್ರಷ್ಟಾಚಾರದ ವಿಚಾರದಲ್ಲಿ ತನಿಖೆ ಎದುರಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರಿಹಾಯ್ದರು.

ಬಿಜೆಪಿ 'ಜನೋತ್ಸವ' ಅಲ್ಲ 'ಭ್ರಷ್ಟೋತ್ಸವ' ನಡೆಸುತ್ತಿದೆ ಎಂಬ ಕಾಂಗ್ರೆಸ್ ನಾಯಕರ ಟೀಕೆಗೆ ಆಕ್ರೋಶ ವ್ಯಕ್ತಪಡಿಸಿದ ಬೊಮ್ಮಾಯಿ, ರಾಜ್ಯ ಕಾಂಗ್ರೆಸ್‌ನ ಹಾಲಿ ಅಧ್ಯಕ್ಷರೂ ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಎದುರಿಸುತ್ತಿದ್ದಾರೆ ಎಂದರು.

ಹಿಂದೆ ಐದು ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ಭ್ರಷ್ಟಾಚಾರ ಮಾಡಿದ್ದಕ್ಕೆ ಜನ ಅವರನ್ನು ಎಲ್ಲಿ ಕೂರಿಸಬೇಕೋ ಅಲ್ಲಿ ಕೂರಿಸಿದ್ದಾರೆ. ಅವರ ಅವಧಿಯಲ್ಲಿ ಬೇಕಾದಷ್ಟು ಭ್ರಷ್ಟಾಚಾರಗಳು ನಡೆದಿವೆ, ಅವುಗಳನ್ನು ಮುಂದಿನ ದಿನಗಳಲ್ಲಿ ಬಹಿರಂಗಪಡಿಸುತ್ತೇವೆ ಎಂದು ಕಿಡಿ ಕಾರಿದರು.

ಚಿತ್ರಾವಳಿ

ಉತ್ತಿಷ್ಠ ಭಾರತದ 8ನೇ ವಾರ್ಷಿಕೋತ್ಸವ ಮತ್ತು ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಿರಂತರ ಕಾರ್ಯಕ್ರಮವನ್ನು ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ಕ್ಯಾಪ್ಟನ್ ನವೀನ್ ನಾಗಪ್ಪ ಅವರನ್ನು ಸನ್ಮಾನಿಸಲಾಯಿತು. ಪ್ರೊ.ಸುಂದರರಾಜ್, ನೀರಜ್ ಕಾಮತ್ ಇದ್ದಾರೆ

ಅಕ್ಷಯನಗರದ ಸಂತೋಷ ಕುಮಾರ್ ರಾವ್ ಚಾರಿಟೆಬಲ್ ಟ್ರಸ್ಟ್ ಹಾಗೂ ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್‌ನ ಸಹಯೋಗದಲ್ಲಿ ಒಂದು ತಿಂಗಳ ಅವಧಿಯಲ್ಲಿ 55 ಸರ್ಕಾರಿ ಶಾಲೆಗಳ 12 ಸಾವಿರ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಯಿತು. ಯು. ಪ್ರಭಾಕರ್ ರಾವ್ ಇದ್ದಾರೆ

ಒಂದು ಜಿಲ್ಲೆ, ಉತ್ಪನ್ನ ಪ್ರೋತ್ಸಾಹಿಸಲು ಕೂ ಜೊತೆ ಒಪ್ಪಂದ

ಲಖನೌ: 'ಒಂದು ಜಿಲ್ಲೆ, ಒಂದು ಉತ್ಪನ್ನ' (ಒಡಿಒಪಿ) ಅಭಿಯಾನವನ್ನು ಸ್ಥಳೀಯ ಭಾಷೆಗಳಲ್ಲಿ ಉತ್ತೇಜಿಸಲು ಉತ್ತರ ಪ್ರದೇಶದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ರಫ್ತು ಉತ್ತೇಜನ ಇಲಾಖೆಯು ಕೂ ಅಪ್ಲಿಕೇಶನ್‌ನೊಂದಿಗೆ ಪರಸ್ಪರ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ.

ಒಪ್ಪಂದದ ಭಾಗವಾಗಿ, ಕೂ ತನ್ನ ಪ್ಲಾಟ್‌ಫಾರ್ಮ್ ಮೂಲಕ 10 ಭಾಷೆಗಳಲ್ಲಿ ವಿಷಯ ಮತ್ತು ಉತ್ಪನ್ನಗಳ ಮಾಹಿತಿಯನ್ನು ನೀಡುವ ಮೂಲಕ ಅರಿವು ಮೂಡಿಸಲಿದೆ.

ವಿಶೇಷವಾಗಿ ಇಂಗ್ಲಿಷ್ ಮಾತನಾಡದ ಜನರಿಗೆ ಮತ್ತು ಸ್ಥಳೀಯ ಕುಶಲಕರ್ಮಿಗಳು ಭಿನ್ನ ಗ್ರಾಹಕರನ್ನು ತಲುಪಲು ಮತ್ತು ದೇಶದಾದ್ಯಂತ ತಮ್ಮ ವ್ಯಾಪಾರವನ್ನು ವಿಸ್ತರಿಸಲು ಇದು ಸಹಾಯ ಮಾಡಲಿದೆ.

ಉತ್ತರ ಪ್ರದೇಶ ಸರ್ಕಾರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ರಫ್ತು ಉತ್ತೇಜನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನವನೀತ್ ಸೆಹಗಲ್ ಹಾಗೂ ಕೂ ಸಹ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಪ್ರಮೇಯ ರಾಧಾಕೃಷ್ಣ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದರು.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: http://www.odopup.in/en

ನಗರದಲ್ಲಿ ಇಂದು

ಎಸ್‌ಇಟಿ ಪ್ರತಿಭಾ ಪುರಸ್ಕಾರ: ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ಟಿ.ಎಚ್. ಅಂಜನಪ್ಪ, ಕೆ. ರಾಮಚಂದ್ರ, ವೂಡೇ.ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಬೆಳಿಗ್ಗೆ 9.30

ಅರ್ಲಿ ಏಜ್ ಯೂನಿವರ್ಸಿಟಿ (ನರ್ಸರಿ, ಎಲ್‌ಕೆಜಿ, ಯುಕೆಜಿ) ಉದ್ಘಾಟನಾ ಸಮಾರಂಭ: ಉದ್ಘಾಟನೆ: ಕೃಷ್ಣ ಬೈರೇಗೌಡ, ಯು.ಬಿ. ವೆಂಕಟೇಶ್, ಅತಿಥಿಗಳು: ಎಂ. ರುಕ್ಮಾಂಗದ ನಾಯ್ಡು, ಅಧ್ಯಕ್ಷತೆ: ಬಿ. ಗುರಪ್ಪ ನಾಯ್ಡು, ಆಯೋಜನೆ: ಬಿಜಿಎಸ್ ಬ್ಲೂಮ್‌ಫೀಲ್ಡ್, ಸ್ಥಳ: ಬಸವನಗುಡಿ, ಬೆಳಿಗ್ಗೆ 9.30

84ನೇ ವರ್ಷದ ಭೀಮನ ಅಮಾವಾಸ್ಯೆ ಪ್ರಯುಕ್ತ ದೊಡ್ಡ ಮಾವಳ್ಳಿ ಬನಶಂಕರಿದೇವಿ ಅಮ್ಮನವರ ವಿಶೇಷ ಪೂಜೆ: ಅತಿಥಿಗಳು: ಕೆ. ನಾರಾಯಣಸ್ವಾಮಿ, ಉದಯ್ ಗರುಡಾಚಾರ್, ಆರ್.ವಿ. ದೇವರಾಜ್, ಎಂ.ಡಿ. ಲಕ್ಷ್ಮೀನಾರಾಯಣ್, ಆಯೋಜನೆ: ಬನಶಂಕರಿ ದೇವಸ್ಥಾನದ ಸೇವಾ ಟ್ರಸ್ಟ್, ಸ್ಥಳ: ದೊಡ್ಡಮಾವಳ್ಳಿ.

ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ: ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಬ್ಯುಸಿನೆಸ್ ಅಕಾಡೆಮಿ, ಉದಯಪುರ, ಕನಕಪುರ ಮುಖ್ಯ ರಸ್ತೆ.

ಜರ್ನಲಿಸ್ಟ್‌ಗಳಿಗಾಗಿ ಪರ್ಯಾಯ ಜೀವನೋಪಾಯ ಸಾಧ್ಯತೆಗಳ ಕುರಿತು ಎರಡು ದಿನಗಳ ಕಾರ್ಯಾಗಾರ: ಉದ್ಘಾಟನೆ: ನಾಗೇಶ ಹೆಗಡೆ, ಅಧ್ಯಕ್ಷತೆ: ಆರ್. ಶ್ರೀಧರ್, ಅತಿಥಿಗಳು: ರಾಘವೇಂದ್ರ ಕೆ. ತೊಗರ್ಸಿ, ಮಾಲತಿ ಭಟ್, ಆಯೋಜನೆ: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್, ಸ್ಥಳ: ಪ್ರೆಸ್ ಕ್ಲಬ್, ಬೆಳಿಗ್ಗೆ 10.30

ನೂಪುರ ನಿರಂತರ ವಾರ್ಷಿಕ ನೃತ್ಯ ಸಮಾರಂಭ: ಭರತನಾಟ್ಯ ಪ್ರಸ್ತುತಿ: ಕಾವ್ಯ ದಿಲೀಪ್ ಮತ್ತು ವಿದ್ಯಾರ್ಥಿನಿಯರು, ಉಪಸ್ಥಿತಿ: ವಿ.ಸೋಮಣ್ಣ, ಅರುಣ ಸೋಮಣ್ಣ, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ರಚನಾ ಡಾನ್ಸ್ ಅಕಾಡೆಮಿ, ಸ್ಥಳ: ಸೇವಾಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 4

ಸುವರ್ಣ ಮಹೋತ್ಸವದ ಉಪನ್ಯಾಸ ಮಾಲೆ: ಉಪನ್ಯಾಸ: ಎಸ್.ಎನ್. ಶ್ರೀಧರ್, ಆಯೋಜನೆ: ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಹೊಸೂರು, ಸಂಜೆ 4.30

ಗೋಪಿಗೀತ–ಭಾಗವತ ಧಾರ್ಮಿಕ ಪ್ರವಚನ: ಪ್ರಸ್ತುತಿ: ದ್ವೈಪಾಯನಾಚಾರ್, ಭಜನೆ: ಆದಿಶಕ್ತಿ ಮಹಿಳಾ ಸಂಘ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6

ಲೈಂಗಿಕ ಅಲ್ಪಸಂಖ್ಯಾತರ ಕುರಿತು ಉಪನ್ಯಾಸ: ಉಪನ್ಯಾಸ– ಮಹೇಶ್ವರಿ ಪಟೇಲ್, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ, ಸಭಾಂಗಣ, ಹೊಂಬೇಗೌಡನಗರ, ವಿಲ್ಸನ್ ಗಾರ್ಡನ್, ಸಂಜೆ 6.30



ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾಮಿಂಗ್ ಆರ್ಟ್ಸ್ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಆದ್ಯ ಮಯ್ಯ

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾಮಿಂಗ್ ಆರ್ಟ್ಸ್ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಆದ್ಯ ಮಯ್ಯ, ನಿರ್ದೇಶನ: ಪವಿತ್ರಾ ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ನಂಜನಗೂಡ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, 7.30

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 02–ಎಕ್ಸ್ಇಎನ್–ಡಬ್ಲ್ಯುಎಸ್–ಯುಬಿಎಲ್‌ಎಸ್2022–23 ದಿನಾಂಕ : 25–07–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಯುಬಿಎಲ್‌ಎಸ್ – ಹುಬ್ಬಳ್ಳಿ ಕಾರ್ಯಾಗಾರದಲ್ಲಿನ ಕ್ಯಾರಿಯೇಜ್ ಫರ್ನಿಶಿಂಗ್ ಶಾಪ್‌ನ ಛಾವಣಿಯ ಲೀಕೇಜ್‌ಗಳು ಮತ್ತು ವ್ಯಾಲಿ ಗಟರ್‌ಗಳ ರಿಪೇರಿ / ಬದಲಾವಣೆ.	ರೂ. 97,07,247.90

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25–08–2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಕಾರ್ಯನಿರ್ವಾಹಕ ಇಂಜಿನಿಯರ್, ಕ್ಯಾರಿಯೇಜ್ ರಿಪೇರಿ ಕಾರ್ಯಾಗಾರ ಹುಬ್ಬಳ್ಳಿ

ಪಿಯುಬಿ/260/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

CIN: L74140KA2000PLC118395

ನೋಂದಾಯಿತ ಕಚೇರಿ: "ಸಲಾರ್‌ಪುರಿಯಾ ಅಸೆಂಟ್", ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095. ಕರ್ನಾಟಕ, ಭಾರತ

ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001

corporateaffairs@teamlease.com, | https://group.teamlease.com/

30ನೇ ಜೂನ್ 2022ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಢೀಕೃತ	
	30.06.2022ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2021ಕ್ಕೆ	30.06.2022ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2021ಕ್ಕೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	163,039.14	124,936.88	189,165.32	138,134.29
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,325.48	2,443.11	2,788.06	2,403.56
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	2,329.98	2,201.66	2,652.12	2,691.78
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,318.85	2,183.61	2,653.87	2,674.49
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಶೀಟ್ ಪ್ರಕಾರ	66,141.89	63,728.97	67,611.24	63,492.89
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	13.63	12.88	15.51	15.83
(ಬಿ) ಡೈಲ್ಯೂಟೆಡ್ (ರೂ.)	13.63	12.88	15.51	15.83

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 30ನೇ ಜೂನ್, 2022ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 30ನೇ ಜೂನ್, 2022ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಳಿಯು 27ನೇ ಜುಲೈ, 2022ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಳಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 27ನೇ ಜುಲೈ, 2022
ಸ್ಥಳ: ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಶ್ರೀ ಬಿಜಯ್ ಕುಮಾರ್ ಅಗರ್‌ವಾಲ್** ಬಿನ್ ಶ್ರೀ ಆರ್.ಎಲ್. ಅಗರ್‌ವಾಲ್, **"ಶುಭಚಾಂದಿ ಗೃಹ ನಿರ್ಮಾಣ್ ಪ್ರೈವೇಟ್ ಲಿಮಿಟೆಡ್"**, ಇದರ ಕಾರ್ಪೊರೇಟ್ ಕಛೇರಿ ಸಂಖ್ಯೆ.3, ಸಲಾರ್‌ಪುರಿಯಾ ವಿಂಡ್ಸರ್, 4ನೇ ಮಹಡಿ, ಹಲಸೂರು ರಸ್ತೆ, ಬೆಂಗಳೂರು–560042. **("ಮಾಲೀಕರು")** ಇವರ ಮಾಲೀಕತ್ವದ **'ಷೆಡ್ಯೂಲ್'**ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಸ್ವತ್ತು ಮತ್ತು ಇನ್ನು ಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಈ ಸ್ವತ್ತಿನ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ. ಸದರಿ ಮಾಲೀಕರು ಷೆಡ್ಯೂಲ್ ಸ್ವತ್ತನ್ನು ಸರ್ಕಾರಿ ಭೂಮಿ ಹರಾಜಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ನೀಡಿದ ಅನುಮತಿಯ ಅನುಸಾರವಾಗಿ ಬೆಂಗಳೂರು ಉತ್ತರ ಉಪವಿಭಾಗದ ಉಪವಿಭಾಗಾಧಿಕಾರಿ ಅವರು ದಿನಾಂಕ: 07.04.2005 ರಂದು ನೆಡೆಸಿದ ಸಾರ್ವಜನಿಕ ಹರಾಜಿನಲ್ಲಿ ಷೆಡ್ಯೂಲ್ ಸ್ವತ್ತನ್ನು ಖರೀದಿಸಿದ್ದಾರೆ ಎಂದು ಮಾಲೀಕರು ತಿಳಿಸಿದ್ದಾರೆ. ಕಂದಾಯ ಇಲಾಖೆ ಬೆಂಗಳೂರು ಇವರು ಮಾಲೀಕರಿಗೆ ದಿನಾಂಕ: 21.09.2015 ರಂದು ಸ್ಥಿರಾಸ್ತಿಯ ಮಾರಾಟದ ಪ್ರಮಾಣ ಪತ್ರವನ್ನು ನೀಡಿದ್ದು, ಇದರ ನೋಂದಣಿ ದಿನಾಂಕ: 01.10.2015 ರ ದಾಸ್ತಾವೇಜು ಸಂಖ್ಯೆ. INR–1–05367–2015–16, ಪುಸ್ತಕ–1, ಸಿ.ಡಿ. ನಂ.INRD153, ಉಪನೋಂದಣಾಧಿಕಾರಿಗಳ ಕಛೇರಿ, ಇಂದಿರಾನಗರ, ಬೆಂಗಳೂರು ಇಲ್ಲಿ ನೋಂದಣಿಯಾಗಿರುವ ಷೆಡ್ಯೂಲ್ ಸ್ವತ್ತಿಗೆ ನಾವೇ ಏಕಮಾತ್ರ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ. ಹಾಗೂ ಸದರಿ ಷೆಡ್ಯೂಲ್ ಸ್ವತ್ತು ಎಲ್ಲಾ ಋಣಭಾರ ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಎಲ್ಲಾ ವ್ಯಕ್ತಿಗಳು, ಹಿಂದೂ ಅವಿಭಕ್ತ ಕುಟುಂಬ ಕಂಪನಿಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆಗಳು, ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ, ಸ್ಥಾಪನೆಯಾಗಿರುವುದೊ ಅಥವಾ ಇಲ್ಲದಿರುವುದೋ, ಹಣಕಾಸು ನೀಡಿಕೆದಾರರು ಮತ್ತು/ಅಥವಾ ಸಾಲನೀಡಿಕೆದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತಿ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವಾನಗಿ, ಪಾಲು, ಹಂಚಿಕೆ, ಧರಣಾಧಿಕಾರ, ಜಪ್ತಿ, ಅಭಿವೃದ್ಧಿ ಹಕ್ಕು, ಪಾಲುದಾರಿಕೆ, ಹಕ್ಕಿನ ವ್ಯವಸ್ಥೆ, ಲಿಸ್ ಪೆಂಡೆನ್ಸ್, ಯಾವುದೇ ನ್ಯಾಯಾಂಗ/ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಮೀಸಲಾತಿ, ಗುತ್ತಿಗೆ/ಒಪ್ಪಂದ, ಪವರ್ ಆಫ್ ಅಟಾರ್ನಿ, ಆಯ್ಕೆ, ಎಫ್‌ಎಸ್‌ಐ/ಎಫ್‌ಎಆರ್ ಕನ್‌ಸಮ್‌ಷನ್, ಪ್ರಥಮ ನಿರಾಕರಣೆ ಹಕ್ಕು, ಮುನ್‌ಕೊಳ್ಳುವಿಕೆ, ಅಥವಾ ಯಾವುದೇ ಸ್ವರೂಪದ ಯಾವುದೇ ಅನುಕೂಲಗಳು, ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಕೇಳಿಕೆ, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆಯಾರೂ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ವಿಭೂತಿಪುರ ಗ್ರಾಮ, ವಸತಿ ಮುಖ್ಯ/ಪ್ರದೇಶ ಸುಧಾರಣೆ ಪರಿಧಿಯ ಬಳಕೆಯ ಉದ್ದೇಶಕ್ಕಾಗಿ ಪರಿವರ್ತಿತವಾಗಿರುವ, ಇಲ್ಲಿರುವ **ಸರ್ವೆ ನಂ.124 ರ ಜಮೀನಿನ ವಿಸ್ತೀರ್ಣ 6 ಎಕರೆ 21 ಗುಂಟೆಗಳು** (ಒಟ್ಟಾರೆ 7 ಎಕರೆ 36 ಗುಂಟೆಗಳಲ್ಲಿ) ಪ್ರಸ್ತುತ **ಬಿಬಿಎಂಪಿ ಮುನಿಸಿಪಲ್ ಖಾತಾ ಸಂಖ್ಯೆ.28, ಸರ್ವೆ ನಂ.124** ಅನ್ನು ಹೊಂದಿರುವ ಈ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವದ ಕಡೆಗೆ : ಸರ್ವೆ ನಂ. 125 ರ ಜಮೀನು;
ಪಶ್ಚಿಮದ ಕಡೆಗೆ : ಸರ್ವೆ ನಂ. 124 ರ ಉಳಿಕೆ ಜಮೀನು ಮತ್ತು ಸರ್ವೆ ನಂ. 123ರ ಜಮೀನು;
ಉತ್ತರದ ಕಡೆಗೆ : ರಸ್ತೆ ಮತ್ತು ಸರ್ವೆ ನಂ. 123ರ ಜಮೀನು; ಮತ್ತು
ದಕ್ಷಿಣದ ಕಡೆಗೆ : ಸರ್ವೆ ನಂ. 121 ರ ಜಮೀನು;

ಸಿ. ಆರ್. ಮುರಳೀಧರನ್,
ಪಾಲುದಾರರು
ದುಅ ಅಸೋಸಿಯೇಟ್ಸ್,
ಅಡ್ವೋಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಹಲಸೂರು ರಸ್ತೆ, ಬೆಂಗಳೂರು–560 042
ದೂ. ಸಂ. 91–80–25588799/25589909
ಇ–ಮೇಲ್: murali@duaassociates.com
ಸ್ಥಳ: ಬೆಂಗಳೂರು
ದಿನಾಂಕ: 28ನೇ ಜುಲೈ, 2022